ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.18/2016-17 ದಿನಾಂಕ: 05-08-2017

**ಸಿಇಟಿ-2017 – ಸೀಟು ಹಂಚಿಕೆ – ಆಯ್ಕೆ ದಾಖಲಿಸಲು ವೇಳಾಪಟ್ಟಿ**

ಸರ್ಕಾರದ ನಿರ್ದೇಶನದಂತೆ, ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳು ರದ್ದುಪಡಿಸಿಕೊಂಡಿರುವ ಮತ್ತು ಉಳಿದಿರುವ ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಆಯುಷ್, ಫಾರ್ಮ ಸೈನ್ಸ್, ಬಿ.ಫಾರ್ಮ ಸೀಟುಗಳಿಗೆ ಇನ್ನೂ ಒಂದು ಸುತ್ತಿನ ಆನ್‌ಲೈನ್ ಸೀಟು ಹಂಚಿಕೆಯ ಮೂಲಕ ಸೀಟುಗಳನ್ನು ಹಂಚಿಕೆ ಮಾಡಲಾಗುವುದು. ಈ ಸೀಟುಗಳನ್ನು ಈ ಕೆಳಗೆ ನೀಡಿರುವ ವೇಳಾಪಟ್ಟಿಯಂತೆ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು.

**ಆಯ್ಕೆ ದಾಖಲಿಸುವ ವೇಳಾಪಟ್ಟಿ**

| Sl. No. | Particulars | Date and Time |
|---|---|---|
| 01 | Display of Seat Matrix | 05-08-2017 after 5.00 pm |
| 02 | Option Entry by Eligible Candidates | From 8.00 pm on 05-08-2017 to 07-08-2017 up to 6.00 pm |
| 03 | Publication of Seat Allotment Results | 08-08-2017 after 8.00 pm |
| 04 | Payment of Fees and downloading of admission order | 09-08-2017 to 10-08-2017 |
| 05 | Last date for reporting to colleges | 10-08-2017 before 5.30 pm |

**ಸೂಚನೆ:**

1. ಈ ಸುತ್ತಿನಲ್ಲಿ ಭಾಗವಹಿಸಲು ಇಚ್ಚಿಸುವ ಅಭ್ಯರ್ಥಿಗಳು ಆಸಕ್ತಿ ಇರುವ ಕೋರ್ಸುಗಳಿಗೆ ಹೊಸದಾಗಿ ಇಚ್ಛೆ / ಆಯ್ಕೆ ಅನ್ನು ದಾಖಲಿಸಬೇಕು.
2. ಈ ಮೊದಲು ದಾಖಲಿಸಿದ್ದ ಇಚ್ಛೆ / ಆಯ್ಕೆಗಳನ್ನು (Options) ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ. ಅಭ್ಯರ್ಥಿಗಳು ತಮಗೆ ಇಷ್ಟವಿರುವ ಸೀಟುಗಳನ್ನು ಮಾತ್ರ ದಾಖಲಿಸಲು ಸೂಚಿಸಿದೆ.

**ಈ ಸುತ್ತಿನಲ್ಲಿ ಇಚ್ಛೆ / ಆಯ್ಕೆ ಅನ್ನು ನೀಡಲು ಅರ್ಹ ಅಭ್ಯರ್ಥಿಗಳು:**

1. ಸೀಟನ್ನು ಆಯ್ಕೆ ಮಾಡಿಕೊಂಡವರು, ಸೀಟನ್ನು ಆಯ್ಕೆ ಮಾಡಿಕೊಳ್ಳದವರು, ಸೀಟು ಆಯ್ಕೆ ಮಾಡಿ ಕಾಲೇಜಿಗೆ ಪ್ರವೇಶ ಪಡೆದವರು / ರದ್ದು ಪಡಿಸಿಕೊಂಡವರು ಈ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.

**ಈ ಸುತ್ತಿನಲ್ಲಿ ಇಚ್ಛೆ / ಆಯ್ಕೆಯನ್ನು ನೀಡಲು ಅವಕಾಶವಿಲ್ಲದ ಅಭ್ಯರ್ಥಿಗಳು:**

1. ಈಗಾಗಲೇ ವೈದ್ಯಕೀಯ ಅಥವಾ ದಂತವೈದ್ಯಕೀಯ ಸೀಟನ್ನು ಆಯ್ಕೆ ಮಾಡಿ Choice 1 ಅಥವಾ Choice-2 ತೆಗೆದುಕೊಂಡಿರುವ ಅಭ್ಯರ್ಥಿಗಳು ಭಾಗವಹಿಸುವಂತಿಲ್ಲ.
2. ಹಿಂದಿನ ಸುತ್ತುಗಳಲ್ಲಿ ಸೀಟು ಹಂಚಿಕೆಯಾಗಿದ್ದರೂ, ಹಂಚಿಕೆಯಾದ ಸೀಟಿಗೆ ಯಾವುದೇ Choice ಅನ್ನು ನೀಡದ ಅಭ್ಯರ್ಥಿಗಳು ಭಾಗವಹಿಸುವಂತಿಲ್ಲ.

**ವಿಶೇಷ ಸೂಚನೆ:**

✓ ಈಗಾಗಲೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು, ಈ ಮೇಲ್ಕಂಡ ಕೋರ್ಸುಗಳಿಗೆ ಆಸಕ್ತಿ ಇದ್ದರೆ ಮಾತ್ರ ಮತ್ತು ನಿಗದಿತ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು ತಾವು ಅಭ್ಯಸಿಸುತ್ತಿರುವ ಕಾಲೇಜುಗಳಿಂದ ಪಡೆಯುವುದನ್ನು ಖಾತ್ರಿಪಡಿಸಿಕೊಂಡು ಈ ಸುತ್ತಿನಲ್ಲಿ ಭಾಗವಹಿಸಲು ಸೂಚಿಸಿದೆ.

✓ ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ತಕ್ಷಣ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟು ತನ್ನಷ್ಟಕ್ಕೆ ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಆ ಸೀಟುಗಳನ್ನು ಹಿಂಪಡೆಯಲು ಸಾಧ್ಯವಾಗುವುದಿಲ್ಲ ಹಾಗೂ ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿಗೆ ಕಡ್ಡಾಯವಾಗಿ ಪ್ರವೇಶವನ್ನು ಪಡೆಯಬೇಕು.

- ✓ ಆದರೆ ಪ್ರವೇಶ ಪಡೆದಿರುವ ಕಾಲೇಜುಗಳಿಂದ ಮೂಲ ದಾಖಲೆಗಳನ್ನು ಪಡೆದು ಹೊಸದಾಗಿ ಹಂಚಿಕೆಯಾಗುವ ಕಾಲೇಜುಗಳಿಗೆ ನಿಗದಿತ ಸಮಯದಲ್ಲಿ ನೀಡಿ ಪ್ರವೇಶ ಪಡೆಯುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.
- ✓ ***ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಯನ್ನು ಪರಿಗಣಿಸಿ ಸೀಟು ಹಂಚಿಕೆಯಾಗುವುದರಿಂದ ಯಾವುದೇ ಕಾರಣಕ್ಕೂ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟನ್ನು ಹಿಂಪಡೆಯಲಾಗುವುದಿಲ್ಲ.***
- ✓ ಸಿಇಟಿ–2017 ರ ಬ್ರೋಚರನಲ್ಲಿ ನೀಡಿರುವ ಇತರೆ ಮಾರ್ಗದರ್ಶನಗಳು ಮತ್ತು ಕಾರ್ಯವಿಧಾನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ಗಮನಿಸಿ:** ಈಗಾಗಲೆ ಸೀಟನ್ನು ಪಡೆದು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಭಾಗವಹಿಸುವ ಮೊದಲು ಪೋಷಕರೊಡನೆ ಚರ್ಚಿಸಿ ಯೋಚಿಸಿ ಆಯುಷ್ ಕೋರ್ಸುಗಳಲ್ಲಿ ಇಷ್ಟವಿದ್ದಲ್ಲಿ ಮಾತ್ರ ಭಾಗವಹಿಸಲು ಕೋರಿದೆ. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ, ಮೊದಲು ಪ್ರವೇಶ ಪಡೆದಿದ್ದ ಕಾಲೇಜಿನ ಸೀಟು ತಂತಾನೆ ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಕಾಲೇಜಿನಲ್ಲಿ **ಮುಂದುವರಿಯಲು ಸಾಧ್ಯವಾಗುವುದಿಲ್ಲ** ಅಂತಹ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶವನ್ನು ಪಡೆಯಲೇಬೇಕು. ಒಂದು ವೇಳೆ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯದಿದ್ದಲ್ಲಿ ಅಭ್ಯರ್ಥಿಯು ಎರಡೂ ಕಡೆ ಸೀಟು ಕಳೆದು ಕೊಳ್ಳುತ್ತಾನೆ ಯಾವುದೇ ಸೀಟನ್ನು ಹೊಂದಿರುವುದಿಲ್ಲ ಹಾಗು ಯಾವುದೇ ಫೀ ಮರು ಪಾವತಿ ಮಾಡುವುದಿಲ್ಲ. ಈ ಸುತ್ತಿನಲ್ಲಿ ಹಂಚಿಕೆಯಾದ ನಂತರ ಕಡ್ಡಾಯವಾಗಿ ಕಾಲೇಜಿಗೆ ಪ್ರವೇಶ ಪಡೆಯಬೇಕು.

ವಿ.ಸೂ.: ಈ ಮೇಲ್ಕಂಡ ವೇಳಾಪಟ್ಟಿಯ ಬಗ್ಗೆ ಯಾವುದೇ ವಿವರಗಳನ್ನು ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಕಳುಹಿಸಲಾಗುವುದಿಲ್ಲ.

ಸಹಿ/–

ಕಾರ್ಯನಿರ್ವಾಹಕ ನಿರ್ದೇಶಕರು